**ದಿನಾಂಕ 8-1-2021 ರಂದು ಬೆಳಗ್ಗೆ 11.30 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, | ಸದಸ್ಯರು | ವರ್ಚುವಲ್ |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ರಾಮಕೃಷ್ಣ, ಆರ್., ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 5. | ಶ್ರೀ ಕೊಟ್ರಪ್ಪ ಬಿ. ಕೊರೇರ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 7. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ಭೌತಿಕ |
| 8. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 9. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 10. | ಡಾ॥ ಎಂ.ಆರ್. ದಿನೇಶ್, ನಿರ್ದೇಶಕರು, ಐ.ಐ.ಹೆಚ್.ಆರ್. ಬೆಂಗಳೂರು (ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು | ವರ್ಚುವಲ್ |
| 11. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ವರ್ಚುವಲ್ ಮತ್ತು ಭೌತಿಕವಾಗಿ ಹಾಜರಿದ್ದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ ಸ್ವಾಗತ ಕೋರಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| **ಐಟಂ-1** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 45ನೇ ಸಭೆಯ ಕಾರ್ಯಸೂಚಿಯ ನಡವಳಿಗಳನ್ನು ಸ್ಥಿರೀಕರಿಸುವುದು.**<br><br>**ಠರಾವು:**<br>ದಿನಾಂಕ 9-11-2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 45ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |
| **ಐಟಂ-2** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 45ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>ಠರಾವು:<br>ದಿನಾಂಕ 9-11-2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 45ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |

| | |
|---|---|
| ಐಟಂ–3 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹತ್ತನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಹತ್ತನೇಯ ಘಟಿಕೋತ್ಸವದಲ್ಲಿ ಸ್ನಾತಕ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ರ ಕಲಂ 13(2)(viii) ರನ್ವಯ ಸ್ನಾತಕ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–4 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹತ್ತನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಹತ್ತನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–5 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹತ್ತನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡಲು ಅನುಮೋದನೆ ಕುರಿತು.**<br><br>**ಠರಾವು:**<br><br>ವಿಸ್ತೃತ ಚರ್ಚೆಯ ನಂತರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹತ್ತನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ, ಸ್ನಾತಕ ವಿದ್ಯಾರ್ಥಿಗಳಿಗಾಗಿ ಕೃವಿವಿ ಬಂಗಾರದ ಪದಕಗಳು, ದಾನಿಗಳ ಬಂಗಾರದ ಪದಕಗಳು ಹಾಗೂ ನಗದು ಬಹುಮಾನ/ ಬಹುಮಾನಗಳನ್ನು ಪಡೆಯುವ ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳ ಯಾದಿಯನ್ನು ರಾಯಚೂರಿನ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಬಂಗಾರದ ಪದಕಗಳು ಹಾಗೂ ನಗದು ಬಹುಮಾನ/ ಬಹುಮಾನಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–6 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ವಿವಿಧ ಬಂಗಾರದ ಪದಕವನ್ನು ಸ್ಥಾಪಿಸಲು ಪ್ರಾಯೋಜಕರ ಮೊತ್ತವನ್ನು ರೂ. 2.00 ಲಕ್ಷಗಳಿಗೆ ಹೆಚ್ಚಿಸುವ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, 2020–21 ನೇ ಸಾಲಿನಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ವಿವಿಧ ಬಂಗಾರದ ಪದಕವನ್ನು ಸ್ಥಾಪಿಸಲು ಪ್ರಾಯೋಜಕರ ಮೊತ್ತವನ್ನು ರೂ. 2.00 ಲಕ್ಷಗಳಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಪರಿಶೀಲಿಸಿ, ತನ್ನ ಅನುಮೋದನೆಯನ್ನು ನೀಡಿತು.<br><br>**(ಕ್ರಮ : ಕುಲಸಚಿವರು)** |

| | |
|---|---|
| ಐಟಂ–7 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2019–20 ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿ, ಸರ್ಕಾರಕ್ಕೆ ಸಲ್ಲಿಸುವ ಕುರಿತು.**<br>**ಠರಾವು:**<br>ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅಧಿನಿಯಮದ ಕಲಂ 57 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2019–20ನೇ ಸಾಲಿನ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಅನುಮೋದಿಸಿತು. **(ಕ್ರಮ : ಕುಲಸಚಿವರು)** |
| ಐಟಂ–8 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಆವರಣದಲ್ಲಿ ಐಐಐಟಿ ಕೇಂದ್ರವನ್ನು ಸ್ಥಾಪಿಸಲು ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ಕ್ರಮವಾಗಿ 10 ಎಕರೆ ಜಮೀನನ್ನು ನೀಡುವ ಕುರಿತು.**<br>ರಾಯಚೂರಿನಲ್ಲಿ ನೂತನವಾಗಿ ಸ್ಥಾಪಿಸಲು ಉದ್ದೇಶಿಸಿರುವ ಐಐಐಟಿ ಕೇಂದ್ರಕ್ಕೆ ಜಿಲ್ಲಾಡಳಿತವು ವಡವಟ್ಟಿ ಗ್ರಾಮದಲ್ಲಿ 67 ಎಕರೆ ಜಮೀನನ್ನು ಗುರುತಿಸಿದ್ದು, ಇದು ನಗರದ ಕೇಂದ್ರಸ್ಥಾನದಿಂದ ಕೇವಲ 7 ಕಿ.ಮೀ. ಅಂತರದಲ್ಲಿರುತ್ತದೆ. ಹಾಗೆಯೇ, ಸ್ನಾತಕೋತ್ತರ ಕೇಂದ್ರ, ಯರಗೇರದಲ್ಲಿ ನೂತನ ರಾಯಚೂರು ವಿಶ್ವವಿದ್ಯಾಲಯವು ಸ್ಥಾಪನೆಯಾಗಿದ್ದು, ಸದರಿ ಕೇಂದ್ರದಲ್ಲಿ 250 ಎಕರೆ ಭೂಮಿಯ ಲಭ್ಯತೆ ಇದ್ದು, ನಗರದ ಕೇಂದ್ರಸ್ಥಾನದಿಂದ 20 ಕಿ.ಮೀ. ಅಂತರದಲ್ಲಿರುತ್ತದೆ. ಈಗಿರುವಾಗ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸದರಿ ಎರಡು ಕೇಂದ್ರಗಳ ಸ್ಥಾಪನೆಗೆ ತಲಾ 10 ಎಕರೆ ಭೂಮಿಯ ಬೇಡಿಕೆ ಇಟ್ಟಿರುವುದನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗೆ ತರಲಾಯಿತು.<br>**ಠರಾವು:**<br>ದೀರ್ಘ ಚರ್ಚೆಯ ನಂತರ, ರಾಯಚೂರಿನಲ್ಲಿ ನೂತನವಾಗಿ ಸ್ಥಾಪಿಸಲು ಉದ್ದೇಶಿಸಿರುವ ಐಐಐಟಿ ಕೇಂದ್ರಕ್ಕೆ ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪನೆಗೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರತಿ ಕೇಂದ್ರಕ್ಕೆ ತಲಾ 10 ಎಕರೆ ಭೂಮಿಯ ಅವಶ್ಯಕತೆಯ ಕುರಿತು ಸಮರ್ಥನೆ ಕೋರಿ ಉನ್ನತ ಶಿಕ್ಷಣ ಇಲಾಖೆ ಇವರಿಗೆ ಮನವಿ ಮಾಡಲು ಹಾಗೂ ಸದರಿ ಕೇಂದ್ರಗಳಿಗೆ ಸರ್ಕಾರದಿಂದ ಹಂಚಿಕೆಯಾದ ಭೂಮಿಯ ಮಾಹಿತಿಯೊಂದಿಗೆ ಮುಂದಿನ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಮಂಡಿಸಲು ಮಂಡಳಿಯು ನಿರ್ಣಯಿಸಿತು. **(ಕ್ರಮ : ಕುಲಸಚಿವರು)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
| 1 | ಸಮಗ್ರ ಕೃಷಿ ಪದ್ಧತಿಯಲ್ಲಿ ರೇಷ್ಮೆ ಕೃಷಿಯನ್ನು ಒಂದು ಘಟಕವಾಗಿ ವಲಯವಾರು ಅಭಿವೃದ್ಧಿ ಪಡಿಸುವುದು ಹಾಗೂ ರೇಷ್ಮೆ ಕೃಷಿಯನ್ನು ಕಲ್ಯಾಣ–ಕರ್ನಾಟಕ ಭಾಗದ ರೈತರಿಗೆ ಹೆಚ್ಚು ಪ್ರಚಾರಗೊಳಿಸುವ ಕ್ರಮ ಕೈಗೊಳ್ಳುವಂತೆ ಮಂಡಳಿಯು ತಿಳಿಸಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು)** |
| 2 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಹೊಸದಾಗಿ ಅಭಿವೃದ್ಧಿಪಡಿಸಿದ ತಳಿಗಳನ್ನು ರೈತರಿಗೆ ಪ್ರಚಾರಗೊಳಿಸಲು ಕ್ರಮಕೈಗೊಳ್ಳುವಂತೆ ಮಂಡಳಿಯು ತೀರ್ಮಾನಿಸಿತು. **(ಕ್ರಮ : ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 25–1–2021 | ಸಹಿ /– 25–1–2021 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**

ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ

ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.